

### ಸಸಿಮಡಿಗಳ ನಿರ್ವಹಣೆ

- ನಾಟಿ ಮಾಡಿದ ಕಡ್ಡಿಗಳು 10–12 ದಿನಗಳಲ್ಲಿ ಚಿಗುರೊಡೆಯುತ್ತವೆ, 30 ದಿನಗಳಲ್ಲಿ ಬೇರೂರಲು ಪ್ರಾರಂಭವಾಗಿ ಕಡ್ಡಿ ನೆಟ್ಟ 70–80 ದಿನಗಳಲ್ಲಿ ಬೇರು ಸಂಪೂರ್ಣವಾಗಿ ಬೆಳೆದಿರುತ್ತದೆ. ಪ್ರತೀ ಸಸಿಗೆ ಕೇವಲ ಒಂದೇ ರೆಂಬೆಯು ಬೆಳೆಯಲು ಬಿಡಬೇಕು.
- 25–30 ದಿನಗಳ ನಂತರ ಒಮ್ಮೆ ಹಾಗೂ 55–60 ದಿನಗಳ ನಂತರ ಮತ್ತೊಮ್ಮೆ ಕಳೆ ತೆಗೆಯಬೇಕು.

### ರಸಗೊಬ್ಬರ ನೀಡುವಿಕೆ

- ಎರಡನೇ ಬಾರಿ ಕಳೆ ತೆಗೆದ ನಂತರ ಪ್ರತೀ ಸಸಿ ಮಡಿಗೆ 150 ಗ್ರಾಂ. ಅಮೋನಿಯಂ ಸಲ್ಫೇಟ್ ಅಥವಾ 35 ಗ್ರಾಂ ಯೂರಿಯಾವನ್ನು ಹಾಕಿ ನಂತರ ನೀರು ಹಾಯಿಸಿ.

### ಸಸ್ಯ ಸಂರಕ್ಷಣೆ

- ಕಾಂಡ ಉಬ್ಬುವಿಕೆ (ಕ್ಯಾಂಕರ್), ಕಡ್ಡಿಗಳ ಕೊಳೆ ರೋಗ, ಕಾಲರ್ ರಾಟ್ ಮತ್ತು ಡೈ ಬ್ಯಾಕ್ ಇವು ಸಸಿ ಮಡಿಯ ಪ್ರಮುಖ ರೋಗಗಳು.
- ಇವುಗಳ ಹತೋಟಿಗಾಗಿ ಬೆವಿಸ್ಟಿನ್/ಡೈಥೇನ್ ದ್ರಾವಣವನ್ನು ಉಪಯೋಗಿಸಿ.



### ಸಸಿಗಳ ನಾಟಿ

- 3–4 ತಿಂಗಳು ಹಳೆಯದಾದ ಸಸಿಗಳು (90–120 ಸೆಂ.ಮೀ. ಎತ್ತರ) ಪೊದೆಗಳನ್ನಾಗಿ ಬೆಳೆಸಲು ಸೂಕ್ತ.
- ಮರಗಳಾಗಿ / ಎತ್ತರದ ಪೊದೆಗಳಾಗಿ ಬೆಳೆಯಲು 6–9 ತಿಂಗಳು ಹಳೆಯದಾದ ಸಸಿಗಳು (>120 ಸೆಂ.ಮೀ. ಎತ್ತರ) ಸೂಕ್ತ.
- ಸಸಿಗಳನ್ನು ನಾಟಿಗೆ ಕೀಳುವ 2–3 ದಿನ ಮೊದಲು ಸಸಿಮಡಿಗಳಲ್ಲಿ ಚೆನ್ನಾಗಿ ನೀರು ಕಟ್ಟಬೇಕು.
- ಕೋಲು ಗುದ್ದಲಿ/ಪಿಕಾಸಿ ಬಳಸಿ 30 ಸೆಂ.ಮೀ. ಆಳದವರೆಗೆ ಮಣ್ಣನ್ನು ಅಗೆದು ಮುಖ್ಯ ಬೇರಿಗೆ ಹಾನಿಯಾಗದಂತೆ ಸಸಿಯನ್ನು ಕೀಳಬೇಕು.
- ಸಸಿಗಳನ್ನು ತಕ್ಷಣವೇ ನಾಟಿ ಮಾಡಲು ತಯಾರಾಗಿರುವ ಗುಳಿಗಳಲ್ಲಿ ಹಾಕಿ ನೆಡಬೇಕು.
- ಸಸಿಗಳನ್ನು ಹೆಚ್ಚು ದೂರ ಕೊಂಡೊಯ್ಯಬೇಕಾದಲ್ಲಿ ಅವುಗಳನ್ನು ಕಂತೆಗಳನ್ನಾಗಿ ಮಾಡಿ, ಒದ್ದೆ ಮಾಡಿದ ಗೋಣಿ ತಾಟಿನಲ್ಲಿ ಸುತ್ತಿ, ದಿನದ ತಂಪಾದ ಹೊತ್ತಿನಲ್ಲಿ ಸಾಗಿಸಬೇಕು.


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ನಿರ್ದೇಶಕರು
**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಮಾನಂದವಾಡಿ ರಸ್ತೆ
ಶ್ರೀರಾಂಪುರ, ಮೈಸೂರು – 570008
ಫೋನ್: 0821–2362757, 2362406
ಫ್ಯಾಕ್ಸ್ : 0821–2362845
email: cstrimys.csb@nic.in www.csrtimys.res.in


Copies: 500 February 2019 Design & Layout: J. Justin Kumar

# ಹಿಪ್ಪುನೇರಳೆ ಸಸಿಗಳನ್ನು ಸಸಿಮಡಿಗಳಲ್ಲಿ ಬೆಳೆಸುವುದು




**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
(ISO 9001: 2015 ಪ್ರಮಾಣೀಕೃತ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ
ಮೈಸೂರು – 570008

# ಹಿಪ್ಪುನೇರಳೆ ಸಸಿಗಳನ್ನು ಸಸಿಮಡಿಗಳಲ್ಲಿ ಬೆಳೆಸುವುದು

ಹಿಪ್ಪುನೇರಳೆ ಸಸಿಗಳೆಂದರೆ ಕಡ್ಡಿಗಳಿಂದ ಬೆಳೆಸಿದ ಸಮೃದ್ಧ ಬೇರುಗಳನ್ನು ಹೊಂದಿರುವ ಗಿಡಗಳು. ಕಡ್ಡಿಗಳನ್ನು ನಾಟಿ ಮಾಡುವ ಬದಲು ಸಸಿಗಳನ್ನು ನೆಡುವುದು ಹೆಚ್ಚು ಸೂಕ್ತ, ಏಕೆಂದರೆ ಅವು ಸಮಾನವಾಗಿ ಅಭಿವೃದ್ಧಿ ಹೊಂದಿ ತ್ವರಿತವಾಗಿ ಸೊಪ್ಪನ್ನು ಉತ್ಪಾದಿಸುತ್ತವೆ. ಸಸಿಮಡಿಗಳನ್ನು ಸ್ಥಾಪಿಸಬೇಕಾದರೆ ಒಂದು ವ್ಯವಸ್ಥಿತ ಮತ್ತು ವೈಜ್ಞಾನಿಕ ವಿಧಾನವನ್ನು ಅನುಸರಿಸಿ ಗರಿಷ್ಠ ಪ್ರಯೋಜನ ಪಡೆಯಬೇಕಾಗುತ್ತದೆ. ಒಂದು ಎಕರೆ ಹಿಪ್ಪುನೇರಳೆ ತೋಟದಿಂದ ಕಟಾವು ಮಾಡಿದ 6 ತಿಂಗಳಲ್ಲಿ 6 ಮೆ.ಟನ್ ಬಿತ್ತನೆಗೆ ಯೋಗ್ಯವಾದ ಕಾಂಡಗಳು ದೊರಕುತ್ತವೆ. 1 ಮೆ.ಟನ್ ಬಿತ್ತನೆ ವಸ್ತುವಿನಿಂದ 27,000 ಕಡ್ಡಿಗಳು ಹಾಗೂ 1 ಎಕರೆಯಿಂದ 1.62 ಲಕ್ಷ ಕಡ್ಡಿಗಳು ಲಭ್ಯವಾಗುತ್ತವೆ.

### ಸಸಿಮಡಿ ತಯಾರಿಕೆ

- ಸಮತಟ್ಟಾದ, ನೀರು ಸುಲಭವಾಗಿ ಬಸಿದು ಹೋಗುವಂತಹ ಮರಳು ಮಿಶ್ರಿತ ಗೋಡು ಮಣ್ಣು ಹೆಚ್ಚು ಸೂಕ್ತ.
- ಭೂಮಿಯನ್ನು 30–40 ಸೆಂ.ಮೀ. ಆಳಕ್ಕೆ ಅಗೆದು / ಉಳುಮೆ ಮಾಡಿ 2–3 ವಾರದ ತನಕ ಬಿಸಿಲಿಗೆ ಬಿಡಬೇಕು.
- ನಂತರ ಮತ್ತೆ 2–3 ಬಾರಿ ಉಳುವೆ ಮಾಡಿ ಮಣ್ಣನ್ನು ಹದ ಮಾಡಿ ಮಟ್ಟಕ್ಕೆ ತರಬೇಕು.
- ಬೇರು, ಕಲ್ಲು, ಕಳೆ, ಕಡ್ಡಿಗಳನ್ನು ತೆಗೆಯಬೇಕು.
- 300 x 200 ಸೆಂ.ಮೀ ಅಳತೆಯ ಚಿಕ್ಕ ಚಿಕ್ಕ ಮಡಿಗಳನ್ನು ತಯಾರಿಸಿಕೊಳ್ಳಬೇಕು.
- ನೀರು ಹಾಯಿಸಲು 25–30 ಸೆಂ.ಮೀ. ಆಳದ ನೀರ್ಗಾಲುವೆಗಳನ್ನು ಒದಗಿಸಬೇಕು.
- ಪ್ರತೀ ಸಸಿ ಮಡಿಗೂ 5 ಬಾಂಡ್ಲಿ ಸಾವಯವ ಗೊಬ್ಬರವನ್ನು ಹಾಕಬೇಕು. ಜೇಡಿ ಮಣ್ಣು ಅಥವಾ ಕಪ್ಪು ಮಣ್ಣು ಆಗಿದ್ದ ಪಕ್ಷದಲ್ಲಿ ಹೆಚ್ಚುವರಿಯಾಗಿ 5 ಬಾಂಡ್ಲಿ ಮರಳನ್ನು ಹಾಕಿ ಮಣ್ಣಿನಲ್ಲಿ ಸೇರಿಸಬೇಕು.





### ಕಡ್ಡಿಗಳ ತಯಾರಿಕೆ

- 10–15 ಮಿ.ಮೀ. ವ್ಯಾಸವಿರುವ 6–8 ತಿಂಗಳು ಬೆಳೆದ ಆರೋಗ್ಯಕರ ರೆಂಬೆಗಳನ್ನು ಆರಿಸಿಕೊಳ್ಳಬೇಕು.
- ಈ ರೆಂಬೆಗಳು ತುಕ್ರಾ ಅಥವಾ ಇತರೆ ಕೀಟ ಬಾಧೆಯಿಂದ ಮುಕ್ತವಾಗಿರಬೇಕು.
- ರೆಂಬೆಗಳ ಹೆಚ್ಚು ಬಲಿತ ಬುಡದ ಭಾಗ ಮತ್ತು ಎಳೆಯ ಹಸಿರು ಮೇಲ್ಭಾಗ ಯೋಗ್ಯವಲ್ಲ.
- ಸಸಿಗಳ ತಯಾರಿಕೆಗೆ 3–4 ಆರೋಗ್ಯಕರ ಕಣ್ಣುಗಳುಳ್ಳ 15–20 ಸೆಂ.ಮೀ. ಉದ್ದದ ಕಡ್ಡಿಗಳನ್ನು ಉಪಯೋಗಿಸಿ.
- ಕಡ್ಡಿಗಳನ್ನು ತಯಾರಿಸುವಾಗ ಹರಿತವಾದ ಮಚ್ಚು, ಸಿಕೇಚರ್ ಅಥವಾ ಕಡ್ಡಿ ತಯಾರಿಕಾ ಯಂತ್ರವನ್ನು ಉಪಯೋಗಿಸಿ.

### ಕಡ್ಡಿಗಳ ಜಾಗರೂಕತೆ

- ಬಿತ್ತನೆ ಕಡ್ಡಿಗಳನ್ನು ತಯಾರಿಸಿದ ತಕ್ಷಣವೇ ನೆಡಬೇಕು.
- ತಕ್ಷಣ ನೆಡಲು ಸಾಧ್ಯವಾಗದಿದ್ದಲ್ಲಿ ಒದ್ದೆ ಮಾಡಿದ ಗೋಣಿ ತಾಟಿನಲ್ಲಿ ಸುತ್ತಿಡಬೇಕು.
- ಅವುಗಳನ್ನು ಸಂಗ್ರಹಣೆ ಮಾಡಬೇಕಾದಲ್ಲಿ, ಎಲ್ಲಾ ಮೊಗ್ಗುಗಳು ಒಂದೇ ದಿಕ್ಕಿನಲ್ಲಿರುವಂತೆ ಜೋಡಿಸಿ ನೆರಳಿನಲ್ಲಿರುವ ಒದ್ದೆಮಾಡಿದ ಮರಳಿನ ಹಾಸಿಗೆ ಮೇಲೆ ಇಟ್ಟು ಹುಲ್ಲು/ಸೋಗೆಯಿಂದ ಮುಚ್ಚಿ.
- ನಿತ್ಯವೂ ಇದರ ಮೇಲೆ ನೀರು ಚಿಮುಕಿಸುತ್ತಾ ಸುಮಾರು 2–3 ದಿನಗಳ ತನಕ ಸಂಗ್ರಹಿಸಿಟ್ಟುಕೊಳ್ಳಬಹುದು.



### ಕಡ್ಡಿಗಳ ನೆಡುವಿಕೆ

- ಕಡ್ಡಿಗಳನ್ನು ನೆಡುವ 2–3 ದಿನ ಮುಂಚೆ ಸಸಿ ಮಡಿಗಳನ್ನು ಒದ್ದೆ ಮಾಡಿ.
- 3–4 ತಿಂಗಳ ಸಸಿಗಳನ್ನು ಬೆಳೆಸಲು, ಸಾಲಿನಲ್ಲಿ 8 ಸೆಂ.ಮೀ. ಹಾಗೂ ಸಾಲಿನಿಂದ ಸಾಲಿಗೆ 30 ಸೆಂ.ಮೀ. ಅಂತರ ಇರುವಂತೆ ನೆಡಿ.
- 6–9 ತಿಂಗಳ ಸಸಿಗಳನ್ನು ಬೆಳೆಸಲು, ಕಡ್ಡಿಗಳನ್ನು ಸಾಲಿನಲ್ಲಿ 10 ಸೆಂ.ಮೀ. ಹಾಗೂ ಸಾಲಿನಿಂದ ಸಾಲಿಗೆ 30 ಸೆಂ.ಮೀ. ಅಂತರ ಇರುವಂತೆ ನೆಡಿ.
- ದಾರದ ಸಹಾಯದಿಂದ ಸಾಲನ್ನು ಗುರುತು ಮಾಡಿಕೊಳ್ಳಬೇಕು, ಬಯಸಿದ ದೂರಕ್ಕೆ ಕಡ್ಡಿಗಳನ್ನು ತೂರಿಸಲು ಸಣ್ಣ ರಂಧ್ರಗಳನ್ನು ಮಾಡಿಕೊಳ್ಳಬೇಕು.
- ಶಿಲೀಂಧ್ರ ರೋಗಗಳಿಂದ ರಕ್ಷಿಸಲು ಕಡ್ಡಿಗಳನ್ನು 15 ನಿಮಿಷಗಳವರೆಗೆ 0.2% ಬೆವಿಸ್ಟಿನ್ ದ್ರಾವಣದಲ್ಲಿ ಅಥವಾ 30 ನಿಮಿಷಗಳವರೆಗೆ ಡೈಥೇನ್ ಎಮ್ 45 ದ್ರಾವಣದಲ್ಲಿ ಅದ್ದಿ ನಂತರ ನಾಟಿ ಮಾಡಬೇಕು.
- ಕಡ್ಡಿಗಳನ್ನು ನೇರವಾಗಿ ಹಾಗೂ ಒಂದು ಕಣ್ಣು ಮಾತ್ರ ಭೂಮಟ್ಟದಿಂದ ಮೇಲೆ ಕಾಣಿಸುವಂತೆ ನೆಡಬೇಕು.

### ನೀರಾವರಿ

- ನಾಟಿ ಮಾಡಿದ ತಕ್ಷಣವೇ ನೀರು ಹಾಯಿಸಿ.
- ತದ ನಂತರ ಮರಳು ಮಿಶ್ರಿತ ಗೋಡು ಮಣ್ಣಾಗಿದ್ದಲ್ಲಿ 4–5 ದಿನಗಳಿಗೊಮ್ಮೆ ಅಥವಾ ಕಪ್ಪು ಜೇಡಿ ಮಣ್ಣಾಗಿದ್ದಲ್ಲಿ 6–7 ದಿನಗಳಿಗೊಮ್ಮೆ ನೀರು ಹಾಯಿಸಿ.

